ಶೇರ್ ಮಾಡಿಕೊಳ್ಳಬೇಕಾಗುತ್ತಿತ್ತು. ಈಗ ಒಂದು ಕೋಣೆಯ ಬದುಕು ಹೇಗಿರುತ್ತದೆ ಎಂಬುದನ್ನು ಅನುಭವಿಸುತ್ತಿದ್ದೆ. ನನ್ನ ದಿನಚರ್ಯೆ ಓಲಾಡುತ್ತಿತ್ತು. ನನ್ನ ಕೋಣೆಯಿಂದ ಒಂದು ಬುಟ್ಟಿಯಲ್ಲಿ ಆಹಾರದ ಕಚ್ಚಾ ಮಾಲುಗಳನ್ನು ಕಿಚನ್‌ಗೆ ಒಯ್ಯುತ್ತಿದ್ದೆ, ಅಲ್ಲಿ ಅತ್ಯಂತ ಸುಲಭದ ಆಹಾರವನ್ನು ಸಿದ್ಧಪಡಿಸುತ್ತಿದ್ದೆ. ನಂತರ ನನ್ನ ಕೋಣೆಗೆ ಬಂದು ಒಂಟಿಯಾಗಿ ಊಟ ಮಾಡುತ್ತಿದ್ದೆ. ನೀನಾ ತನ್ನ ಮನೆಯಿಂದ ಒಂದು ಸೋಫಾ ಕಮ್ ಬೆಡ್ ಒಯ್ಯಲು ಅನುಮತಿಯನ್ನು ಕೊಟ್ಟಿದ್ದಳು; ಈ ಸೋಫಾದಲ್ಲಿ ಕೂತು ನಿತ್ಯದ ಕೆಲಸಗಳನ್ನು ಮಾಡುತ್ತಿದ್ದೆ, ರಾತ್ರಿ ಅದೇ ಸೋಫಾದಲ್ಲಿ ಮಲಗುತ್ತಿದ್ದೆ. ಶಾಲಾ ಅಧ್ಯಾಪಕನಾಗಿದ್ದ ನನ್ನ ವೇತನ ಪ್ರಸ್ತುತ ನನಗೆ ಇದನ್ನೇ ಕರುಣಿಸುತ್ತಿತ್ತು.

ನೀನಾಳ ಅರಮನೆಯಿಂದ ಬಂದ ನನಗೆ ಆ ಕೋಣೆ ಒಂದು ಗೂಡಿನಂತೆ ಭಾಸವಾಗುತ್ತಿತ್ತು. 'ಟೀಚರ್, ಪಾಪರ್...!' ಎಂದು ನೀನಾ ಉಚಿತವಾಗಿಯೇ ಹೇಳುತ್ತಿದ್ದಳು. ಇದು ನನ್ನ ನಿಜವಾದ ಸಾಮರ್ಥ್ಯ. ಅಧ್ಯಾಪಕನೊಬ್ಬನ ಯೋಗ್ಯತೆ...

ಅದು ನನ್ನ ಜೀವನದ ಒಂದು ಕಷ್ಟಕರ ಕಾಲಚಕ್ರವಾಗಿತ್ತು. ನಾಲ್ಕೂ ಕಡೆಗಳಲ್ಲಿ ವ್ಯರ್ಥತೆ ಮತ್ತು ಸತ್ವಹೀನತೆ ಕಾಣಬರುತ್ತಿತ್ತು. ನನ್ನನ್ನು ನಾನು ತುಂಬಾ ಒಂಟಿ ಎಂದು ಮನಗಾಣುತ್ತಿದ್ದೆ. ಶಾಲೆಯಿಂದ ಬಂದ ನಂತರ ನನ್ನ ಗೂಡಿನಲ್ಲಿ ಒಂಟಿಯಾಗಿ ಕೂತು ವಿಷಾದವನ್ನು ಅನುಭವಿಸುತ್ತಿದ್ದೆ. ಎಲ್ಲಿಗೂ ಹೋಗಲು, ಯಾರನ್ನೂ ಭೇಟಿಯಾಗಲು ಮನಸ್ಸಾಗುತ್ತಿರಲಿಲ್ಲ. ನೀನಾ ಕೊಟ್ಟ ಹಳೆಯ ಸೋಫಾದಲ್ಲಿ ಕೂತು ನೀನಾ ಮತ್ತು ನನ್ನ ಸಂಬಂಧಗಳ ಬಗ್ಗೆ ಯೋಚಿಸುತ್ತಿದ್ದೆ. ನಾನೆಲ್ಲಿ ತಪ್ಪಾಗಿದ್ದೆ? ಒಬ್ಬರೊಂದಿಗೆ ಮನಸ್ತಾಪ ಅಥವಾ ಸಂಬಂಧ ಕಡಿಯಲು ಒಬ್ಬರು ಮಾತ್ರ ಕಾರಣರಾಗುವುದಿಲ್ಲ. ಅನೇಕ ಕಾರಣಗಳಿಂದಾಗಿ ಮನುಷ್ಯರ ನಡುವೆ ಸಂಘರ್ಷ ಮತ್ತು ಕಲಹಗಳು ಹುಟ್ಟುತ್ತವೆ. ನೀನಾಳನ್ನು ನನ್ನಿಂದ ದೂರ ಮಾಡಿದ ಆ ಒಟ್ಟು ಕಾರಣಗಳು ಯಾವುವು? ಜೊಹಾನಾ, ಸಿಗರೇಟ್, ಕಿಲ್ಟ್, ಥಾಯ್ಲೆಂಡ್ ಅಥವಾ ಮಾನ್ಸೂನ್...?

'ಒಂದು ವೇಳೆ ನಾನು ಜೊಹಾನಾ ಮತ್ತು ನೀವು – ಈ ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭ ಬಂದರೆ, ನಾನು ಜೊಹಾನಾಳನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ.'

'ಇದು ಹಳೆ ಕಾಲದ ಡ್ರೆಸ್. ನೀವು ಈ ಡ್ರೆಸ್‌ನಲ್ಲಿ ಹಳ್ಳಿಯ ಗುಗ್ಗುವಿನಂತೆ ಕಾಣುತ್ತೀರಿ...'

'ಇನ್ನು ನನ್ನಿಂದ ಈ ವಾಸನೆಯನ್ನು ಸಹಿಸಲು ಸಾಧ್ಯವಿಲ್ಲ... ಸಿಗರೇಟ್ ಬಿಡು, ಇಲ್ಲದಿದ್ದಲ್ಲಿ ನಾನು ನಿನ್ನನ್ನು ಬಿಡುತ್ತೇನೆ...'

'ನನ್ನನ್ನು ಥಾಯ್ಲೆಂಡಿಗೆ ಏಕೆ ಕರೆದುಕೊಂಡು ಬಂದೆ...? ನಾನು ಮೊಬೈಲ್ ಇಟ್ಟುಕೊಳ್ಳಲು ನೀನೇಕೆ ಬಿಡಲಿಲ್ಲ? ನನ್ನ ಇಮೇಲ್‌ಗಳನ್ನು ಚೆಕ್ ಮಾಡಲು ಏಕೆ ಬಿಡಲಿಲ್ಲ...? ನನ್ನ ತಂದೆಯ ಸಾವಿನ ಸಮಯದಲ್ಲಿ ಅವರ ಬಳಿ ನಾನಿರದಾದೆ, ಇದಕ್ಕೆ ನೀನೇ ಕಾರಣ, ನೀನೇ...'

'ನನ್ನ ತಂದೆ–ತಾಯಿಯ ಮಾನ್ಸೂನ್ ಶೋರೂಮ್ ಮಾರಾಟವಾಯಿತು; ಅದು ಅವರ ಸೃಷ್ಟಿಯಾಗಿತ್ತು, ಅದು ಅವರಿಗೆ ಒಂದು ಮಗುವಾಗಿತ್ತು. ಈ ಬಗ್ಗೆ ನೀವು ತಟಸ್ಥರಾಗಿದ್ದಿರಿ.'

ಈ ವಿವಾದ ಯಾವಾಗ ಮತ್ತು ಯಾವ ಕ್ರಮದಲ್ಲಿ ಉದ್ಭವಿಸಿದವು ಎಂಬುದು ನನಗೆ ತಿಳಿದಿಲ್ಲ, ಆದರೆ ಈ ಎಲ್ಲಾ ವಿವಾದಗಳು ನಮ್ಮ ಸಂಬಂಧಗಳಲ್ಲಿ ಬಿರುಕನ್ನು ಮೂಡಿಸಿದವು; ನಮ್ಮ ಸಂಬಂಧಗಳನ್ನು ಒಳಭಾಗದಿಂದ ಸೀಳಿತು. ಬಹುಶಃ ನೀನಾ ಈ ತೀರ್ಮಾನವನ್ನು ಒಂದು ಆವೇಗಕ್ಕೊಳಗಾಗಿ ಕೈಗೊಂಡಿದ್ದಾಳೆ; ಕೆಲವು ದಿನಗಳ ವಿಯೋಗದ ನಂತರ ಅವಳು ತನ್ನ 'ಸ್ಕಾರ್ಟ್'ನನ್ನು ನೆನಪಿಸಿಕೊಳ್ಳುತ್ತಾಳೆ; ನನ್ನನ್ನು ಮತ್ತೆ ಕರೆಯಿಸಿಕೊಳ್ಳುತ್ತಾಳೆ ಎಂದು ನಾನು ವ್ಯರ್ಥವಾಗಿ ಯೋಚಿಸಿದ್ದೆ.

ಆದರೆ... ನಾವು ಯೋಚಿಸಿದ್ದು ಸದಾ ಸಂಭವಿಸುವುದೇ? ನೀನಾ ತನ್ನ ಮಾಜಿ ಪತಿ ಓಲಿವರ್‌ನಿಂದ ಬೇರೆಯಾದ ನಂತರ, ನೀನಾಳಿಗೆ ಎರಡನೆಯ ಜೀವನ ಸಂಗಾತಿಯನ್ನು ಹುಡುಕುವಲ್ಲಿ ವರ್ಷಗಳೇ ಸಂದಿದ್ದವು. ಆದರೆ ನನ್ನಿಂದ ಬೇರೆಯಾದ ನಂತರ ಅವಳಿಗೆ ವಿದುರ ಪೀಟರ್ ತಕ್ಷಣ ಲಭಿಸಿದ್ದ. ನೀನಾ ಪೀಟರ್‌ನೊಂದಿಗೆ ಇರಲಾರಂಭಿಸಿದ್ದಳು. ನನಗೆ ಒಪ್ಪಂದದ ಎಲ್ಲಾ ಬಾಗಿಲುಗಳು ಮುಚ್ಚಿಹೋದಂತೆ ಅನ್ನಿಸಿತು. ನೀನಾ ಬೇರೊಬ್ಬ ಪುರುಷನನ್ನು ಹಿಡಿದಿದ್ದಳು.

ನೀನಾ ವಿಚ್ಛೇದನದ ಕಾಗದಪತ್ರಗಳನ್ನು ಹಿಡಿದು ನನ್ನ ಶಾಲೆಗೆ ಬಂದಿದ್ದಳು. ಅವಳು ಪೀಟರ್‌ನೊಂದಿಗೆ ಈ ಮೊದಲೇ ವಾಸಿಸುವುದನ್ನು ಆರಂಭಿಸಿದ್ದಳು. ನಾನು ಸಂಬಂಧಗಳಲ್ಲಿ ಅಲ್ಪಸ್ವಲ್ಪ ವಿಶ್ವಾಸಘಾತುಕತನವನ್ನು ಪಾಪಕಾರ್ಯ ಅಥವಾ ಅನೈತಿಕತೆಯೆಂದು ತಿಳಿಯುವುದಿಲ್ಲ. ನಾನೂ ಏನು ಪ್ರಾಮಾಣಿಕನಲ್ಲ... ನಾನು ಶಾಲೆಗೆ ಬಂದಿದ್ದ ನೀನಾಳನ್ನು ಶಾಲೆಯ ಕ್ಯಾಂಟೀನ್‌ಗೆ ಕರೆದೊಯ್ದೆ. ನಾವು ಒಟ್ಟಿಗೆ ಕೂತು ಕಾಫಿ ಕುಡಿದೆವು. ಅವಳು ಕಾಫಿಯನ್ನು ಕುಡಿದ ನಂತರ ಪತ್ರವನ್ನು ನನ್ನೆಡೆಗೆ ಚಾಚುತ್ತಾ ಸಂಯಮದಲ್ಲಿ ಹೇಳಿದಳು, 'ಪಾಲ್... ನಾವು ವಿಚ್ಛೇದನ ಪಡೆದುಕೊಳ್ಳುವುದು ಒಳ್ಳೆಯದು. ಆಗ ನೀವೂ ಸ್ವತಂತ್ರರಾಗುವಿರಿ, ನಾನೂ...'

ವಿವಾಹ ಎಂಥ ಒಡಂಬಡಿಕೆ ಎಂದರೆ, ಅದನ್ನು ಜೀವನಪರ್ಯಂತ ನಿರ್ವಹಿಸುವ ಮತ್ತು ನಡುವೆಯೇ ಮುರಿದುಕೊಳ್ಳುವ ಸಾಧ್ಯತೆಗಳಿರುತ್ತವೆ. ನಾನು ಮೌನಿಯಾಗಿ ವಿಚ್ಛೇದನದ ಪತ್ರಗಳಿಗೆ ನನ್ನ ಸಹಿ ಹಾಕಿದೆ. ಬೇರೆ ಮಾರ್ಗವೂ ಇರಲಿಲ್ಲ.

'ಪೀಟರ್ ಎಲ್ಲಿ ಭೇಟಿಯಾದ?' ನನ್ನ ಪ್ರಶ್ನೆ ಕೇಳಿ, ಅವಳು ಕದಿಯುವಾಗ ಸಿಕ್ಕಿಬಿದ್ದ ಕಳ್ಳಿಯಂತೆ ಭಯಪಟ್ಟಳು. ಅವಳು ಹುಸಿ ನಗುತ್ತಾ ಹೇಳಿದಳು, 'ನಾವು ಸ್ಪೇನ್‌ನಲ್ಲಿ ಎನ್‌ವಿರಾನ್‌ಮೆಂಟ್ ಕಾನ್ಫರೆನ್ಸ್‌ನಲ್ಲಿ ಭೇಟಿಯಾಗಿದ್ದೆವು. ಅವರು ಸಹ ಅಲ್ಲಿಗೆ ಪ್ರತಿನಿಧಿಯಾಗಿ ಬಂದಿದ್ದರು...'

ನಾನು ಮನಸ್ಸಿನಲ್ಲಿ ಲೆಕ್ಕ ಹಾಕಿದೆ... ನೀನಾ ಸ್ಪೇನ್ ಇಂಟರ್‌ನ್ಯಾಷನಲ್ ಕಾನ್ಫರೆನ್ಸ್‌ಗೆ ಎರಡು ವರ್ಷಕ್ಕೆ ಮೊದಲು ಹೋಗಿದ್ದಳು. ಅಂದರೆ ಅವಳು ಪೀಟರ್‌ನನ್ನು ಆಗಿನಿಂದ ಬಲ್ಲಳು. ಅವಳೆಂದೂ ಈ ಬಗ್ಗೆ ನನಗೇಕೆ ಹೇಳಲಿಲ್ಲ?

'ನಮ್ಮ ಬ್ರೇಕಪ್‌ಗೂ ಪೀಟರ್‌ಗೂ ಯಾವ ಸಂಬಂಧವಿಲ್ಲ' ಅವಳು ಸ್ಪಷ್ಟನೆ ಕೊಟ್ಟಳು.

ನಾನು ಮತ್ತೆ ಮನಸ್ಸಿನಲ್ಲಿ ಯೋಚಿಸಿದೆ. ನಮ್ಮ ಬೇರ್ಪಡುವಿಕೆಯಲ್ಲಿ ಅವನ ಪಾತ್ರ ಇಲ್ಲದೆ ಇರಬಹುದು, ಆದರೆ ಅವನು ಒಂದು ವಿಕಲ್ಪವಾಗಿ ನಿನಗೆ ಸದಾ ಲಭ್ಯವಾಗಿದ್ದ. ಈ ಮಾತನ್ನು ನೀನಾಗೆ ಹೇಳಲಿಲ್ಲ. ಇದಕ್ಕೆಲ್ಲಾ ಈಗ ಅರ್ಥವಿರಲಿಲ್ಲ. ನನ್ನ ಮತ್ತು ನೀನಾಳ ನಡುವೆ ಎಲ್ಲವೂ ಮುಗಿದುಹೋಗಿದ್ದವು.

'ನಿಮ್ಮ ಕೆಲವು ಬಟ್ಟೆಗಳು ಮತ್ತು ಇನ್ನಿತರ ವಸ್ತುಗಳು ಇನ್ನೂ ನನ್ನ ಮನೆಯಲ್ಲಿವೆ. ಅವುಗಳನ್ನು ಏನು ಮಾಡಲಿ?' ಅವಳು ಕೇಳಿದಳು.

'ಎಲ್ಲವನ್ನೂ ಎಸೆದುಬಿಡು' ನಾನು ಇದ್ದಕ್ಕಿದ್ದಂತೆ ಉತ್ತೇಜಿತನಾದೆ, 'ಈಗ ನನ್ನ ಏಳು ವರ್ಷಗಳ ಬನಿಯನ್, ಚಡ್ಡಿ, ಟವಲ್, ಕರ್ಚೀಫ್, ರೇಜರ್, ಬ್ಲೇಡ್... ಎಲ್ಲವನ್ನೂ ಅಲ್ಲಿಂದ ತೆಗೆದುಕೊಂಡು ಬರಲಾರೆ'.

ನಾನು ಏಳು ವರ್ಷಗಳ ಕಾಲ ಇದ್ದ ಮನೆಯಿಂದ ನನ್ನೆಲ್ಲಾ ಅಸ್ತಿತ್ವವನ್ನು ಅಳಿಸಿಹಾಕುವುದು ಹೇಗೆ ಸಾಧ್ಯವಿತ್ತು? ಕೆಲವು ದಿನಗಳ ನಂತರ ನೀನಾ ನನಗೆ ಫೋನ್ ಮಾಡಿ, 'ನೀವಿಲ್ಲಿ ಬಿಟ್ಟುಹೋದ ನಿಮ್ಮೆಲ್ಲಾ ವಸ್ತುಗಳನ್ನು ಒಟ್ಟು ಮಾಡಿ ಮನೆಯ ಬೇಸ್‌ಮೆಂಟಿನಲ್ಲಿ ಇಟ್ಟಿದ್ದೇನೆ. ನೀವು ಬೇಕಾದಾಗ ಬಂದು ನಿಮ್ಮ ವಸ್ತುಗಳನ್ನು ತೆಗೆದುಕೊಂಡು ಹೋಗಬಹುದು' ಎಂದು ತಿಳಿಸಿದಳು. ನಾನೆಂದೂ ಅವಳ ಮನೆಯಿಂದ ಆ ವಸ್ತುಗಳನ್ನು ತೆಗೆದುಕೊಳ್ಳಲು ಹೋಗಲಿಲ್ಲ. ನನಗೆ ಅವುಗಳ ಅವಶ್ಯಕತೆ ಸಹ ಇರಲಿಲ್ಲ. ಅಗತ್ಯವಾದವುಗಳನ್ನು ಅವಳ ಮನೆಯಿಂದ ತೆಗೆದುಕೊಂಡು ಬಂದಿದ್ದೆ.

ನಾನು ಆಗಾಗ ಖಿನ್ನತೆಗೆ ಒಳಗಾಗುತ್ತಿದ್ದೆ. ಮೊದಲ ಹೆಂಡತಿ ಸೌಂದ್ರಾಳ ನಂತರ ಎರಡನೆಯ ಹೆಂಡತಿ ನೀನಾಳಿಂದಲೂ ವಿಚ್ಛೇದನ! ನಾನೆಂಥ ಮನುಷ್ಯ ಎಂದು ನನಗೆ ನನ್ನ ಮೇಲೆಯೇ ಸಿಟ್ಟು ಬರುತ್ತಿತ್ತು. ನಾನು ಯಾವ ಮಣ್ಣಿನಿಂದ ನಿರ್ಮಾಣವಾಗಿದ್ದೇನೆ? ಯಾವ ಮಹಿಳೆಯೂ ನನ್ನೊಂದಿಗೆ ಶಾಶ್ವತವಾಗಿರಲು ಬಯಸುವುದಿಲ್ಲ. ನನ್ನಲ್ಲೇ ದೋಷವಿದೆ. ಸೌಂದ್ರಾ ಮತ್ತು ನೀನಾ ಇಬ್ಬರೂ ನನ್ನ ಮೇಲೆ ಒಂದೇ ತೆರನಾದ ಆರೋಪವನ್ನು ಹೊರಿಸಿದ್ದರು ಎಂಬುದನ್ನು ನೋಡಿ ನನಗೆ ಆಶ್ಚರ್ಯವಾಗಿತ್ತು; ನಾನು ಬೇರೆ ಬೇರೆ ದೇಶಗಳಲ್ಲಿ, ಬೇರೆ ಬೇರೆ ಸನ್ನಿವೇಶದಲ್ಲಿ, ಬೇರೆ ಬೇರೆ ವಾತಾವರಣದಲ್ಲಿ, ಬೇರೆ ಬೇರೆ ಕಾಲದಲ್ಲಿ ಅವರೊಂದಿಗಿದ್ದೆ. ನಾನು ಇಷ್ಟು ವರ್ಷಗಳ ನಂತರವೂ ಬದಲಾಗಲಿಲ್ಲ ಎಂಬುದನ್ನು ಯೋಚಿಸಿ ನನಗೆ ಆಶ್ಚರ್ಯವಾಗುತ್ತದೆ. ನಾನು ಸೌಂದ್ರಾಳ ಪತಿಯಾಗಿದ್ದಾಗ, ದಾಂಪತ್ಯ ಜೀವನ ಹೇಗೆ ನಡೆಯುತ್ತದೆ? ಹೆಣ್ಣಿನ ಬುದ್ಧಿ ಎಂದರೇನು? ಹೆಣ್ಣಿನ ಗುಣ ಎಂದರೇನು? ಎಂಬುದು ನನಗೆ ತಿಳಿದಿರಲಿಲ್ಲವೆಂದು ಯೋಚಿಸುತ್ತಿದ್ದೆ. ನನಗೆ ಸಮಸ್ಯೆಗಳನ್ನು ಎದುರಿಸುವುದು ತಿಳಿದಿರಲಿಲ್ಲ.